ಮಾಡಿಕೊಳ್ಳಬೇಕೆಂದು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಒಂದು ಆದೇಶ ಕಳುಹಿಸಿಕೊಟ್ಟಿದ್ದು....

ಶ್ರೀ ಎಸ್. ಬಂಗಾರಪ್ಪ: ಕೌನ್ಸಿಲ್‌ನಲ್ಲಿ ಪ್ರಶ್ನೆಗಳಿರುವುದರಿಂದ ನಾನು ಅಲ್ಲಿಗೆ ಹೋಗುತ್ತಿದ್ದೇನೆ, ಶ್ರೀಮಾನ್ ಖರ್ಗೆಯವರು ಇದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಡಿ.ಎಲ್.ಆರ್.ಸಿ. ಮೂಲಕ ನೇಮಕಾತಿಗಳನ್ನು ಮಾಡತಕ್ಕ ದೃಷ್ಟಿಯಿಂದ ...

ಅಧ್ಯಕ್ಷರು: ನೀವು ಕೊಟ್ಟಿರುವ ಸೂಚನೆ ನನಗೆ ಬಂತು. ಅದನ್ನು ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದೇನೆ. ನಾಳೆ ಇದನ್ನು ...

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಅತ್ಯಂತ ಪ್ರಮುಖವಾಗಿರುವ ವಿಷಯ. ಈಗಾಗಲೇ ಟೆಲಿಗ್ರಾಂ ಮೂಲಕ ಸುತ್ತೋಲೆ ಕಳುಹಿಸಿ ತಡೆಯಾಜ್ಞೆ ...

ಅಧ್ಯಕ್ಷರು: ಈ ಎಲ್ಲಾ ವಿಚಾರಗಳೂ ಕಾಲಿಂಗ್ ಅಟೆನ್‌ಷನ್ ಮೂಲಕ ಸಭೆಯ ಮುಂದೆ ಬರುತ್ತದೆ, ಆಗ ನೀವು ಕೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಕಾಲಿಂಗ್ ಅಟೆನ್‌ಷನ್ ಮೂಲಕವೇ ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿ ಕೊಟ್ಟರೆ, ...

ಶ್ರೀ ಎಸ್. ಹೆಚ್. ಕೌಜಲಗಿ: ನಾನೂ ಕೂಡ ತಮ್ಮ ಕಛೇರಿಗೆ ಬಂದು ಈ ವಿಷಯ ತಿಳಿಸಿರುತ್ತೇನೆ. ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು: ಇವತ್ತು ಆಗುವುದಿಲ್ಲ. ನೀವು ಬಂದಿಲ್ಲವೆಂದು ನಾನು ಹೇಳಲಿಲ್ಲ. ತಾವೂ ಬಂದಿದ್ದೀರಿ, ಪ್ರಸ್ತಾಪ ಮಾಡಿದ್ದೀರಿ, ಮಾತನಾಡಿದ್ದೀರಿ. ನಿಮ್ಮ ಹೆಸರನ್ನೂ ಇದರಲ್ಲಿ ಸೇರಿಸುತ್ತೇನೆ. ಇದನ್ನು ಇಂದೇ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನೇಕೋಡ್: ಮಾನ್ಯ ಅಧ್ಯಕ್ಷರೇ, ನಾನು ಧಾರವಾಡ ಜಿಲ್ಲೆಗೆ ಮತ್ತು ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಂತೆ ನಾನು 3–4 ಗಮನ ಸೆಳೆಯುವ ಸೂಚನೆಗಳನ್ನು ತಮಗೆ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು: ತಾವು ನನ್ನ ಛೇಂಬರ್‌ಗೆ ಬಂದು ಈ ಬಗ್ಗೆ ಮಾತನಾಡಿ ಈಗ ಗಮನ ಸೆಳೆಯುವ ಸೂಚನೆಗಳು

ಗಮನಸೆಳೆಯುವ ಸೂಚನೆಗಳು.

ಕರ್ನಾಟಕ ಚಲನಚಿತ್ರೋದ್ಯಮ ಬಂದ್‌ನಿಂದ ಉದ್ಭವಿಸಿರುವ ಪರಿಸ್ಥಿತಿ

ಶ್ರೀ ಡಿ.ಬಿ. ಚಂದ್ರೇಗೌಡ: (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ ಕರ್ನಾಟಕ ಚಲನಚಿತ್ರೋದ್ಯಮ ಬಂದ್‌ನಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ.ಎಸ್. ನಾಡಗೌಡ: (ಕಾರ್ಮಿಕ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ದಿನಾಂಕ 8.11.1990ರಂದು ಕಾರ್ಮಿಕ ಆಯುಕ್ತರು ಕರ್ನಾಟಕ ಬೆಂಗಳೂರು ಇವರ ಮುಂದೆ ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ತಂತ್ರಜ್ಞರ ಒಕ್ಕೂಟ ಮತ್ತು ಕರ್ನಾಟಕ ಚಲನ ಚಿತ್ರ ವಾಣಿಜ್ಯೋದ್ಯಮ ಮಂಡಳಿ, ಚಲನಚಿತ್ರ ನಿರ್ಮಾಪಕರ ಸಂಘದ ಸದಸ್ಯರೊಡನೆ ಸುದೀರ್ಘ ಚರ್ಚೆ ನಡೆಸಲಾಯಿತು. ಚರ್ಚೆಯಲ್ಲಿ ಅನುಬಂಧದಲ್ಲಿ ಸೂಚಿಸಿದ ಅಂಶಗಳ ಮೇಲೆ ಕರಡು ಒಪ್ಪಂದದ ಸಾಧ್ಯತೆ ಬಗ್ಗೆ ಸಲಹೆಗಳನ್ನು ಕೊಡಲಾಯಿತು. ಆದರೆ ಸದರಿ ನಿರ್ಮಾಪಕರ ಸಂಘದವರು ಈ ಬಗ್ಗೆ ಉಭಯ ಪಕ್ಷಗಳೊಂದಿಗೆ ಚರ್ಚೆಸುತ್ತಿರುವುದರಿಂದ ಸಭೆಯನ್ನು ಮುಂದುವರಿಸಲು ಕೇಳಿಕೊಂಡಿದ್ದರು. ನಂತರ ದಿನಾಂಕ 26.11.1990ರಂದು ಕರಡು ಸಲಹೆಗಳ ಬದಲಾಗಿ ನಿರ್ಮಾಪಕ ಸಂಘದವರು ಕರಡು ಒಪ್ಪಂದವೊಂದನ್ನು ಕಾರ್ಮಿಕ ಒಕ್ಕೂಟದವರಿಗೆ ಕಳಿಸಿ ಅವರ ಪ್ರತಿಕ್ರಿಯೆ ಕೇಳಿದ್ದರು. ಕಾರ್ಮಿಕ ಸಂಘದವರು ಈಗ ನಿರ್ಮಾಪಕ ಸಂಘದ ಕರಡು ಒಪ್ಪಂದಕ್ಕೆ ಒಪ್ಪಿಗೆಯಿಲ್ಲವೆಂದು

ತಿಳಿಸಿದ್ದಾರೆ. ಕಾರಣ ಕೆಲಸದ ಘಂಟೆಗಳನ್ನು 8 ರಿಂದ 16 ಘಂಟೆಗಳಿಗೆ ವಿಸ್ತರಿಸಲಾಗಿದೆ, ಅಲ್ಲದೆ ಕೆಲವು ಹುದ್ದೆಗಳಲ್ಲಿ ದೈನಂದಿನ ವೇತನವನ್ನು ಮೊದಲಿದ್ದ ವೇತನಕ್ಕಿಂತ ಕಡಿಮೆ ಮಾಡಲಾಗಿದೆ ಎಂದಿದ್ದಾರೆ. ಅಲ್ಲದೆ ನಿರ್ಮಾಪಕರ ಸಂಘವು ಸದರಿ ಒಪ್ಪಂದವನ್ನು ಒಕ್ಕೂಟದ ಸದಸ್ಯರ ಜೊತೆ ಸಹಿ ಮಾಡುವ ಪ್ರಸ್ತಾಪ ವಿರುದ್ಧವಾಗಿ ಸದಸ್ಯ ಕಾರ್ಮಿಕ ಸಂಘದ ಜೊತೆ ಮಾಡಬೇಕೆಂಬ ಪ್ರಸ್ತಾಪದ ಮಾಡಿರುವುದೂ ಸಮಂಜಸವಲ್ಲವೆಂದಿದ್ದಾರೆ. ಈ ಬಗ್ಗೆ ಚರ್ಚೆಗಳು ಮುಂದುವರಿಯಲಿವೆ.

ಅನುಬಂಧ

1. ಚಲನಚಿತ್ರ ನಿರ್ಮಾಪಕರ ಬೇರೆ ಕೆಲವು ತೊಂದರೆ ಸಂಬಂಧಪಟ್ಟ ಇಲಾಖೆಯೊಡನೆ ಪರಿಹಾರವಾದೊಡನೆ ಚಲನಚಿತ್ರ ಉದ್ಯಮದಲ್ಲಿ ಎಂದಿನಂತೆ ಕೆಲಸ ನಿರ್ವಹಿಸಲು ಉಭಯ ಪಕ್ಷದವರು ಒಪ್ಪಿರುತ್ತಾರೆ.

1(ಎ). ಉದ್ಯಮದಲ್ಲಿ ಚಾಲನೆಯ ನಿಖರವಾದ ದಿನಾಂಕವನ್ನು ಚಲನಚಿತ್ರ ನಿರ್ಮಾಪಕರ ಸಂಘದಿಂದ ಸೂಚಿಸಲಾಗುವುದು.

2. ಉದ್ಯಮದಲ್ಲಿ ಶಾಂತಿ ಹಾಗೂ ಶಿಸ್ತನ್ನು ಕಾಪಾಡಿಕೊಂಡು ಬರಲು ಉಭಯತ್ರಕರೂ ಶ್ರಮಿಸುತ್ತಾರೆ.

3. ಯಾವುದೇ ಕುಶಲ ಕೆಲಸಕ್ಕೆ ಯಾರನ್ನಾಗಲೀ ತೆಗೆದುಕೊಳ್ಳುವ ಹಕ್ಕು ಚಿತ್ರ ನಿರ್ಮಾಪಕರಿಗೆ ಇರಬಹುದೆಂದು ಕಾರ್ಮಿಕ ಸಂಘದ ಪ್ರತಿನಿಧಿಗಳು ಒಪ್ಪಿರುತ್ತಾರೆ. ಆದರೆ ಸಂಬಂಧಿಸಿದ ಕುಶಲ ಕಾರ್ಮಿಕರನ್ನು ಕರ್ನಾಟಕಕ್ಕೆ ಸೇರಿದ ಕನ್ನಡಿಗರಿಗೆ ಆದ್ಯತೆ ನೀಡಬೇಕೆಂದೂ

4. ಕಾರ್ಮಿಕರಿಗೆ ಒದಗಿಸಬೇಕಾದ ಕನಿಷ್ಠ ವೇತನ ದುಡಿತದ ಸಮಯ ಇವುಗಳ ಬಗ್ಗೆ ಶೋಷಣೆ ಮಾಡುವುದಿಲ್ಲವೆಂದೂ ಚಲನಚಿತ್ರ ನಿರ್ಮಾಪಕರು ಹಾಗೂ ಚಲನಚಿತ್ರ ಮಂಡಳಿಯವರು ಒಪ್ಪಿರುತ್ತಾರೆ.

ಮಾನ್ಯ ಅಧ್ಯಕ್ಷರೇ ಇದರ ಜೊತೆಗೆ ನಾವು ನಿನ್ನೆ ದಿವಸ ಸಾಯಂಕಾಲ ಈ ಫಿಲಂ ಛೇಂಬರ್ ಆಫ್ ಕಾಮರ್ಸ್ ಚೇರ್‌ಮೆನ್ ಜೊತೆ ಮತ್ತು ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಅಶೋಕ್‌ರವರ ಜೊತೆಯಲ್ಲಿ ಚರ್ಚೆಯನ್ನು ಮುಂದುವರಿಸಿದ್ದೇವೆ. ಅಲ್ಲಿ ಬರುವಂತಹ ಪ್ರಶ್ನೆ ಇಷ್ಟೇ. ಆ ಕಾರ್ಮಿಕ ಒಕ್ಕೂಟದವರು ಯಾವ ಒಂದು ಜಾಯಿಂಟ್ ಆಕ್ಷನ್ ಕಮಿಟಿ ಆಫ್ ಸೌತ್ ಇಂಡಿಯನ್ ಫಿಲಮ್ಸ್ ಮಾಡಿದ್ದಾರೋ ಅದರಲ್ಲಿ ಯಾವ ತರಹ ನಿಯಮಗಳನ್ನು ಸೂಚನೆ ಮಾಡಿಕೊಂಡಿದ್ದಾರೋ, ಆದರ ಪ್ರಕಾರ ನಮಗೆ ವೇಜಸ್ ಕೊಡಬೇಕು ಮತ್ತು ಅಲ್ಲಿ ಯಾವ ರೀತಿ ಅಗ್ರಿಮೆಂಟ್ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಮಾಡಿಕೊಂಡಿದ್ದಾರೋ, ಆ ರೀತಿ ಇಲ್ಲಿ ಆಗಬೇಕು ಎಂದು ಅವರು ನಮ್ಮನ್ನು ಕೇಳಿಕೊಂಡರು. ಆದರೆ ಆ ರೀತಿ ಮಾಡಲು ನಮಗೆ ಸಾಧ್ಯವಾಗುವುದಿಲ್ಲ ಎಂದು ಚಲನಚಿತ್ರೋದ್ಯಮ ಮಂಡಲಿಯವರು ಹೇಳುತ್ತಾರೆ. ಹಾಗೂ ಆ ರೀತಿ ನಮ್ಮಲ್ಲಿ ಅನ್ವಯಿಸಲು ಆಗುವುದಿಲ್ಲ ಈಗಾಗಲೇ ನಮ್ಮ ಫಿಲಮ್ ಇಂಡಸ್ಟ್ರಿ ಸಿಕ್ ಆಗಿದೆ. ನಾವು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದೇವೆ ಎಂದು ಅವರು ಹೇಳಿದರು. ನಾವು ಈಗಾಗಲೇ ಬಾರ್ಡರ್ ಡಿಸ್ಟ್ರಿಕ್ಟ್‌ಗಳಲ್ಲಿ ಬೇರೆ ಭಾಷೆಗಳ ಚಿತ್ರಗಳು ಜಾಸ್ತಿ ರನ್ ಆಗುತ್ತವೆ, ನಮ್ಮ ಕನ್ನಡ ಭಾಷೆ ಚಿತ್ರಗಳು ರನ್ ಆಗುವುದಿಲ್ಲ, ಆದ್ದರಿಂದ ನಾವು ಸೌತ್ ಇಂಡಿಯನ್ ಫಿಲಮ್ಸ್ ತರಹ ನಿಯಮಗಳನ್ನು ಇಲ್ಲಿ ಪಾಲನೆ ಮಾಡಲು ಸಾಧ್ಯ ಇಲ್ಲ ಎಂದು ಹೇಳಿದರು. ಇದಲ್ಲದೆ ನಮ್ಮ ರಾಜ್ಯ ಸರ್ಕಾರ 1981ರಲ್ಲಿ ಸಿನಿಮಾ ಕೆಲಸಗಾರರ ಕಾಯಿದೆಯನ್ನು ರಚಿಸುವುದಕ್ಕೋಸ್ಕರ ನಮ್ಮ ಇಂಡಿಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನಲ್ಲಿ ಬರುವಂಥ ಹಲವಾರು ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದವರಿಗೆ ಪ್ರಪೋಸಲ್ ಕಳುಹಿಸಲಾಯಿತು. ಆದರೆ ಕೇಂದ್ರ ಸರ್ಕಾರದಿಂದ ಇನ್ನೂವರೆಗೆ ಕೂಡಾ ಯಾವ ರೂಲ್ಸ್ ಆಗಲೀ ಅಥವಾ ಗೈಡ್‌ಲೈನ್ಸ್ ಆಗಲೀ ಬಂದಿಲ್ಲ. ಆದ್ದರಿಂದ ಇದನ್ನು ಅನುಷ್ಠಾನಕ್ಕೆ ತರುವುದಕ್ಕಾಗಲಿಲ್ಲ. ಆದರೆ ಸದ್ಯದಲ್ಲೇ ಇನ್ನು ಒಂದು ಅಥವಾ ಎರಡು ದಿವಸಗಳಲ್ಲಿ ಈ ಒಂದು ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತೇವೆ ಮತ್ತು ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಈ ಸಭೆಗೆ ಆಶ್ವಾಸನೆ ಕೊಡುತ್ತೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ ಇದರಲ್ಲಿ ಏನಿದೆ ಅಂದರೆ, ಕಳೆದ ಹತ್ತಾರು ವರ್ಷಗಳ ಶೋಷಣೆಯಿಂದ ನೊಂದ ಸಹಸ್ರಾರು ಜನ ಕಾರ್ಮಿಕರು 3 ಸಂಸ್ಥೆಗಳನ್ನು ಮಾಡಿಕೊಂಡು ಒಂದು ಒಕ್ಕೂಟವನ್ನು ರಚನೆ ಮಾಡಿಕೊಂಡಿದ್ದಾರೆ. ಸರಿಸುಮಾರು 3 ಸಾವಿರ ಜನ ಅದರಲ್ಲಿ ಸದಸ್ಯರಾಗಿದ್ದಾರೆ. ಕರ್ನಾಟಕ ಚಲನಚಿತ್ರ ಕಾರ್ಮಿಕರ, ಕಲಾವಿದರ, ತಂತ್ರಜ್ಞರ ಒಕ್ಕೂಟವೆಂದು ರಿಜಿಸ್ಟರ್

ಮಾಡಿಸಿಕೊಂಡಿದ್ದಾರೆ. ಕೆಲಸಗಾರರಿಗೆ ಕೊಡಬೇಕು? ಏನು ಬಿಡಬೇಕು ಅನ್ನತಕ್ಕಂತಾದ್ದಕ್ಕೆ ಕೆಲವು ನಿಯಮಗಳಿವೆ. ಈ ಹಿಂದೆ 1952ರಲ್ಲಿ, ಸಿನಿಮಾ ಆಟೋಗ್ರಫಿ ಆಕ್ಟ್ ಅಸ್ತಿತ್ವಕ್ಕೆ ಬಂತು ಅದರಲ್ಲಿ ಡೈಲಿ ವರ್ಕರ್ಸ್ ವೆಲ್‌ಫೇರ್ ಆಕ್ಟ್ ಎಂದು 1981ರಲ್ಲಿ ಮಾಡಿದ್ದಾರೆ. ಈ ಎಲ್ಲಾ ಶಾಸನಗಳ ಮಧ್ಯೆ ಕೆಲಸ ಮಾಡತಕ್ಕಂಥ ನೌಕರರಿಗೂ ಮತ್ತು ಚಲನಚಿತ್ರ ತಯಾರು ಮಾಡತಕ್ಕಂಥವರಿಗೂ ಮಧ್ಯೆ ಎಲ್ಲಾ ಕಾಲಕ್ಕೂ ಕರ್ನಾಟಕ ಫಿಲ್ಮ್ ಪ್ರೊಡ್ಯೂಸರ್ಸ್ ಛೇಂಬರ್ ಆಫ್ ಕಾಮರ್ಸ್ ಅನ್ನತಕ್ಕಂಥ ಒಂದು ಸಂಸ್ಥೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿತ್ತು. ಮಧ್ಯವರ್ತಿಯಾಗಿ ಕೆಲಸ ಮಾಡತಕ್ಕಂಥ ಈ ಸಂಸ್ಥೆ 1987–88ರ ಸುಮಾರಿನಲ್ಲಿ ಒಂದು ಕರಾರನ್ನು ಮಾಡಿಕೊಂಡರು. ಎರಡೂ ಕಡೆಯವರು ಆ ಕರಾರಿಗೆ ಒಪ್ಪಿಕೊಂಡರು. ಆದರೆ ಈಗ ಏನಾಗಿದೆಯೆಂದರೆ, ಚಿತ್ರ ತಯಾರಕರು ಹಿಂದೆ ಆಗಿರತಕ್ಕಂಥ ಈ ಕರಾರಿಗೆ ವಿರುದ್ಧವಾಗಿ ಕಡಿಮೆ ಸಂಬಳ ಕೊಡತಕ್ಕಂತಾದ್ದು ಮತ್ತು 16 ಗಂಟೆಗಳ ಕಾಲ ದುಡಿಸಿಕೊಳ್ಳತಕ್ಕಂಥ ಒಂದು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಈ ಸಮಸ್ಯೆ ಉದ್ಭವವಾಗಿದೆ. ಇಂಥ ಸಮಸ್ಯೆಗಳು ಬಂದಾಗ ಸಹಜವಾಗಿ ಮಾತುಕತೆಗಳು ನಡೆಯುತ್ತವೆ ಆದರೆ, ಏಕಾಏಕಿ ನೌಕರರ ಜೊತೆ ಮಾತುಕತೆ ನಡೆಸದೆ ಚಿತ್ರಗಳನ್ನು ತಯಾರು ಮಾಡತಕ್ಕಂಥವರು ನವೆಂಬರ್ 1ನೇ ತಾರೀಖಿನಿಂದ ಏಕಮುಖವಾದಂಥ ನಿಲುಗಡೆಯನ್ನು ಘೋಷಣೆ ಮಾಡಿದರು. ಇದರಿಂದಾಗಿ ಸುಮಾರು 26–27 ದಿವಸಗಳಿಂದ 3 ಸಾವಿರ ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಇದರಲ್ಲಿ ನನಗೆ ಏನೂ ಜವಾಬ್ದಾರಿ ಇಲ್ಲವೆಂದು ಸರ್ಕಾರ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂತಾದ್ದು, 16 ಗಂಟೆಗಳು ಕೆಲಸ ಮಾಡಬೇಕು. ಮಾಡುತ್ತಿದ್ದಾರೋ ಇಲ್ಲವೋ? ಶಾಸನ 16 ಗಂಟೆಗಳು ಕೆಲಸ ಮಾಡತಕ್ಕಂಥಾದ್ದನ್ನು ಮಾನ್ಯ ಮಾಡುವುದಿಲ್ಲ ಮತ್ತೆ ದಿನಾಂಕ 15–11–90ರಲ್ಲಿ ಲೇಬರ್ ಕಮೀಷನರ್‌ರವರ ಕಛೇರಿಗೆ ಕರೆದು ಚರ್ಚೆ ಮಾಡಿದರೆಂದು ನನಗೆ ವರದಿ ಬಂದಿದೆ. ಆದರೆ ಆ ಚರ್ಚೆ ಅಲ್ಲಿಗೇ ನಿಂತು ಹೋಯಿತು. ಏತಕ್ಕೆ ನಿಂತುಹೋಯಿತೆಂದರೆ ಬಹುಶಃ ಚಲನಚಿತ್ರ ಮಾಲೀಕರು ,ಅಥವಾ ತಯಾರು ಮಾಡತಕ್ಕಂಥವರು ಸ್ವಲ್ಪ ಆರ್ಥಿಕವಾಗಿ ಸಬಲರಿದ್ದಾರೆ. ಆದ್ದರಿಂದ ಅವರು ಯಾರನ್ನೂ ಬೇಕಾದರೂ ಮ್ಯಾನೇಜ್ ಮಾಡಬಹುದು ಎನ್ನುವ ಸಂಶಯಕ್ಕೆ ಇದು ಎಡೆ ಕೊಟ್ಟಿದೆ. ಇಲ್ಲಿ, ಕರ್ನಾಟಕದಲ್ಲಿ ತಯಾರಾಗತಕ್ಕಂಥ ಕೆಲವು ಚಲನಚಿತ್ರಗಳಿಗೆ ಚಲನಚಿತ್ರ ಸಹಾಯಧನವೆಂದು ಕೊಡುತ್ತೇವೆ. ಅಂದರೆ ಸಬ್ಸಿಡಿ ಎಂದು. ಪ್ರದರ್ಶನ ತೆರಿಗೆಯಲ್ಲಿ ಶೇಕಡಾ 50 ರಷ್ಟು ವಿನಾಯಿತಿ ಕೊಡುತ್ತೇವೆ. ಆದರೆ ಈ ಎರಡೂ ಕೊಡುವುದಕ್ಕೆ ಮುಖ್ಯವಾದಂಥ ಒಂದು ನಿಬಂಧನೆ ಏನು? ಮುಖ್ಯವಾದಂಥ ನಿಬಂಧನೆ, ಚಲನಚಿತ್ರಗಳು ಕರ್ನಾಟಕದಲ್ಲೇ ತಯಾರಾಗಬೇಕು, ಎಲ್ಲಾ ವಿಭಾಗದಲ್ಲೂ; ಇದುವರೆಗೆ ಮದ್ರಾಸ್‌ನಲ್ಲೇ, ಬಾಂಬೆಯಲ್ಲಿ ಏನು ತಯಾರು ಮಾಡಿಕೊಂಡು ಬರುತ್ತಿದ್ದರು; ಈಗ ಆ ಎಲ್ಲಾ ಕೆಲಸವನ್ನು ಕರ್ನಾಟಕದಲ್ಲೇ ಮಾಡಬೇಕು. ಇದರ ಉದ್ದೇಶ, ಕನ್ನಡ ನೆಲದಲ್ಲಿರತಕ್ಕಂಥ ಜನಕ್ಕೆ ಹೆಚ್ಚು ನೌಕರಿ ದೊರೆಯಬೇಕು ಮತ್ತು ನಮ್ಮ ಚಲನಚಿತ್ರಗಳು ನಮ್ಮ ಭಾಗದ ಎಲ್ಲಾ ವಿಭಿನ್ನವಾದ ಸಂಸ್ಕೃತಿ, ಪರಂಪರೆ, ಇತಿಹಾಸಗಳನ್ನು ಪ್ರತಿಧ್ವನಿ ಮಾಡಬೇಕು ಅನ್ನತಕ್ಕಂಥ ಸದಿಚ್ಛೆಯಿಂದ ಇದನ್ನು ಮಾಡಿದರು. ಇದನ್ನು ತೀರ್ಮಾನ ಮಾಡದೆ ಹೀಗೇ ಬಿಟ್ಟುಕೊಂಡಿರುವುದರಿಂದ ಏನಾಗಿದೆ? ಯಾರಾದರು ಒಬ್ಬರನ್ನು ಮಧ್ಯೆ ಸೇರಿಸಬೇಕಾಗಿದೆ. ಚಲನಚಿತ್ರರಂಗ ಇವತ್ತು ಕಷ್ಟದಲ್ಲಿದೆಯೆಂದು ಇವತ್ತು ಎಲ್ಲರಿಗೂ ಗೊತ್ತಿದೆ. ಸುಮಾರು 80 ಚಿತ್ರಗಳು ಒಂದು ವರ್ಷದಲ್ಲಿ ಹೊರಗೆ ಬಂದರೆ ಒಂದು, ಎರಡು ಅಥವಾ ನಾಲ್ಕು ಚಿತ್ರಗಳನ್ನು ಬಿಟ್ಟರೆ ಉಳಿದ ಚಿತ್ರಗಳು ದುಡ್ಡು ಕಾಣುವುದಿಲ್ಲ. ಇದು ನಮ್ಮ ಇತಿಮಿತಿಯಿಂದಾಗಿ, ಇದನ್ನು ಭೌಗೋಳಿಕ ಇತಿಮಿತಿ ಎಂದೇ ಹೇಳಬಹುದು. ಹೊರಗಡೆ ಎಷ್ಟು ಪ್ರದರ್ಶನ ಆಗುತ್ತದೆ, ಬಿಡುತ್ತದೆ ಎಂಬುದು ಮುಖ್ಯವಲ್ಲ. ಜೊತೆಗೆ ಈಗಾಗಲೇ ವಿಡಿಯೋಗಳು ಬಂದಿದೆ. ಬೇರೆ ಬೇರೆ ರೀತಿಯಲ್ಲಿ ಚಲನಚಿತ್ರ ನಿರ್ಮಾಪಕರಿಗೆ ತೊಂದರೆ ಇದೆ. ಹೀಗೆಲ್ಲಾ ಹೀಗೆ ತೊಂದರೆ ಇದೆ ಎಂದು ಹೇಳಿ ಮೂರು ಸಾವಿರ ಜನ ನೌಕರರನ್ನು ಯಾವುದಾದರೂ ಒಂದು ಶಾಸನದ ವ್ಯಾಪ್ತಿಗೆ ತರತಕ್ಕ ಪ್ರಯತ್ನ ನಡೆಯಬೇಕು. ಶಾಸನದ ವ್ಯಾಪ್ತಿಗೆ ತಂದಿಲ್ಲದೇ ಇರುವುದೇ ಈ ದೋಷಗಳಿಗೆ ಕಾರಣ. ಅವರು ಹೇಳುವ ಹಾಗೆ 16 ಗಂಟೆಗಳ ಕೆಲಸ ಎಂದರೇನು? ಫ್ಯಾಕ್ಟರಿ ಆಕ್ಟ್‌ನಲ್ಲಿ ಬೆಳಿಗ್ಗೆ 8 ಗಂಟೆಗೆ ಫ್ಯಾಕ್ಟರಿಗೆ ಹೋಗಿ ಸಾಯಂಕಾಲ 6 ಗಂಟೆಗೆ ಬರುವಂತಹ ವ್ಯವಸ್ಥೆ ಅಲ್ಲಿ ಇಲ್ಲ. ಕಾಫೀ ತೋಟದಲ್ಲಿ 8 ಗಂಟೆ ಕೆಲಸ ಮಾಡು ಎಂದು ಹೇಳುವುದಕ್ಕೆ ಆಗುವುದಿಲ್ಲ. ಚಲನಚಿತ್ರ ನಿಗಮದಲ್ಲಿ ಅನೇಕ ಕಾರಣಗಳಿಗಾಗಿ 10 ದಿವಸ, 12 ದಿವಸ 16 ದಿವಸ

ಹೀಗೆ ವ್ಯತ್ಯಾಸಗಳು ಬರುತ್ತದೆ. ನಾನು ತಮ್ಮಲ್ಲಿ ಈಗ ಪ್ರಶ್ನೆ ಮಾಡತಕ್ಕದ್ದು, ನೀವು ಈ ಅನುಬಂಧದಲ್ಲಿ ಹೇಳಿದ್ದೀರಿ, ಒಪ್ಪಿಗೆ ಆಗಿದೆ, ಅವರೆಲ್ಲರೂ ಒಪ್ಪಿಕೊಂಡಿದ್ದಾರೆ ಎಂದು. 'ಚಲನಚಿತ್ರ ನಿರ್ಮಾಪಕರ ಬೇರೆ ಕೆಲವು ತೊಂದರೆ ಸಂಬಂಧಪಟ್ಟ ಇಲಾಖೆಯೊಡನೆ ಪರಿಹಾರವಾದೊಡನೆ ಚಲನಚಿತ್ರ ಉದ್ಯಮದಲ್ಲಿ ಎಂದಿನಂತೆ ಕೆಲಸ ನಿರ್ವಹಿಸಲು ಉಭಯ ಪಕ್ಷದವರು ಒಪ್ಪಿರುತ್ತಾರೆ' ಎಂದು ತಾವು ಅನುಬಂಧದಲ್ಲಿ ಹೇಳಿದ್ದೀರಿ. ಈ ರೀತಿ ಒಪ್ಪಿದ ಮೇಲೆ ಕೆಲಸ ಶುರು ಮಾಡುವುದಕ್ಕೆ ಏನು ತೊಂದರೆ? ಇಬ್ಬರೂ ಒಪ್ಪಿದ ಮೇಲೆ ಕಾರ್ಯ ಪ್ರಾರಂಭ ಮಾಡುವುದಕ್ಕೆ ಏನು ತೊಂದರೆ? ಅವರು 24 ಗಂಟೆಯೊಳಗೆ ಪ್ರಾರಂಭ ಮಾಡುತ್ತೇವೆ ಎನ್ನುತ್ತಾರೆ. ನನ್ನ ಹತ್ತಿರಕ್ಕೂ ಅವರು ಬಂದಿದ್ದರು. ನಾನು ಇಬ್ಬರಿಗೂ ಹೇಳಿದೆ. ಇಬ್ಬರೂ ಹೊಂದಿಕೊಂಡು ಹೋಗಬೇಕು ಎಂದು. ಹೃದಯಗಳ ಸಂಯೋಗ ಆಗದೇ ಇದ್ದರೆ ಈ ಉದ್ಯಮದಲ್ಲಿ ಕೆಲಸ ಮಾಡವುದು ಬಹಳ ಕಷ್ಟ ಆಗುತ್ತದೆ. ಬಹಳ ಮುಖ್ಯವಾಗಿರತಕ್ಕದ್ದು 16 ಗಂಟೆಗಳ ಕೆಲಸ. 16 ಗಂಟೆಗಳ ಕಾಲ ಕೆಲಸ ಮಾಡಬೇಕು ಎಂದು ನಿರ್ಮಾಪಕರೂ ಒತ್ತಾಯ ಮಾಡುವುದೂ ಬೇಡ. ಈಗ ಇರತಕ್ಕ ವ್ಯವಸ್ಥೆಯಲ್ಲಿ ಹೋಗುವುದಕ್ಕೆ ಅವರು ಸಿದ್ಧರಿದ್ದಾರೆ. ನೀವು 16 ಗಂಟೆಗಳ ಕಾಲ ಕೆಲಸ ಮಾಡಿಕೊಡುತ್ತೇವೆ ಎಂದು ಬರೆದುಕೊಡಿ ಎಂದು ಕೇಳುತ್ತಾರೆ. ಇಂತಹ ಹಲವು ಸಣ್ಣ ಪುಟ್ಟ ತೊಂದರೆಗಳು ಏನು ಇದ್ದಾವೆ, ಅಂದರೆ ಕನಿಷ್ಠ ವೇತನ; ಯಾವುದಾದರೂ ಒಂದು ನಿಗದಿತ ವೇತನ ಬರಬೇಕು. ಇಲ್ಲದಿದ್ದರೆ ಚಲನಚಿತ್ರ ತಯಾರಕರಿಗೆ ತೊಂದರೆ ಇದೆ, ಕೆಲಸ ಮಾಡತಕ್ಕ ಕಾರ್ಮಿಕರಿಗೆ ತೊಂದರೆ ಇದೆ. ಆದ್ದರಿಂದ ಕೆಲವು ನಿಯಮಗಳನ್ನು ತರುವುದಕ್ಕೆ ಪ್ರಯತ್ನ ಮಾಡಿ. ತಮಿಳುನಾಡಿನಲ್ಲಿ ಅಥವಾ ಮಹಾರಾಷ್ಟ್ರದಲ್ಲಿ ಇರತಕ್ಕಂಥ ಒಂದು ನಿಯಮವನ್ನು ತರಿಸಿ ತಕ್ಷಣ ಆ ನಿಯಮಗಳನ್ನು ಜಾರಿ ಕೊಡುವುದಕ್ಕೆ ಸರ್ಕಾರ ಏನು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಅಥವಾ ನನ್ನದೇನೂ ಜವಾಬ್ದಾರಿ ಇಲ್ಲವೆಂದು ಕೈಕಟ್ಟಿ ಕುಳಿತರೆ ಸಿನೆಮಾ ಇಂಡಸ್ಟ್ರೀ ಮುಗಿದು ಹೋಗುತ್ತದೆ. ಮಾಲೀಕರೂ ಹೋಗುತ್ತಾರೆ, ಕಾರ್ಮಿಕರೂ ಹೋಗುತ್ತಾರೆ. ನಾವು ಎಲ್ಲಾ ಬಂದ್‌ಗಳನ್ನು ನೋಡಿದ್ದೇವೆ. ಯಾವ್ಹಾಗಲೂ ಮುಷ್ಕರ ನಡೆಸತಕ್ಕವರು ಕಾರ್ಮಿಕರು. ಆದರೆ ಇಲ್ಲಿ ಮುಷ್ಕರ ಹೂಡಿರತಕ್ಕವರು ಮಾಲೀಕರು, ಚಲಚಿತ್ರ ತಯಾರಕರು. ಈ ದ್ವಂದ್ವ ಇದೆ. ಈ ತಯಾರಕರು ಏತಕ್ಕೆ ಮುಷ್ಕರ ಹೂಡಿದ್ದಾರೆ, ಅಂದರೆ ಅವರಿಗೆ ಇರತಕ್ಕ ತೊಂದರೆಗಳ ಬಗ್ಗೆ ಏಕಾಏಕಿ ಇಂತಹ ಕೆಲಸ ಮಾಡತಕ್ಕದ್ದು ಸರಿಯಲ್ಲ, ಪುನಃ ಏನಾದರೂ ಮಾಡಿ ಅವರನ್ನು ಕೂಡಿಸಿ ತಕ್ಷಣ ಪ್ರಯತ್ನ ಮಾಡಿ ಆ ಮೂರು ಸಾವಿರ ಜನರ ಹೊಟ್ಟೆಗೆ ಏನಾದರೂ ವ್ಯವಸ್ಥೆ ಮಾಡಿಕೊಡುತ್ತಿರಾ ಎಂಬ ಬಗ್ಗೆ ತಿಳಿಯಬಯಸುತ್ತೇನೆ.

ಶ್ರೀ ಎಸ್. ರಮೇಶ್ : (ಯುವಜನ ಸೇವೆಗಳು, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು): ಮಾನ್ಯ ಉಪ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ...

ಅಧ್ಯಕ್ಷರು : ಇನ್ನೂ ಕೆಲವು ಮಾನ್ಯ ಸದಸ್ಯರು ಈ ಸೂಚನೆಗೆ ಹೆಸರುಗಳನ್ನು ಸೇರಿಸಿದ್ದಾರೆ; ಆದ್ದರಿಂದ ಅವರೂ ಮಾತನಾಡಲಿ.

† ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಸಭಾಧ್ಯಕ್ಷರೇ, ಹೊಸದಾಗಿ ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಗಳು ಒಂದೆರಡು ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸತಕ್ಕ ಭರವಸೆಯನ್ನು ಕೊಟ್ಟಿದ್ದಾರೆ. ನಾನು ನಿಜಕ್ಕೂ ಕೂಡ ತುಂಬಾ ಸಂತೋಷ ಪಡುತ್ತೇನೆ; ಇದನ್ನು ಸ್ವಾಗತ ಮಾಡುತ್ತೇನೆ; ಅವರು ಒಂದೆರಡು ದಿನಗಳಲ್ಲಿ ಇದನ್ನು ಬಗೆಹರಿಸುವುದಕ್ಕೆ ಯಶಸ್ವಿಯಾದರೆ. ಈಗ ಪ್ರಶ್ನೆ ಇರತಕ್ಕದ್ದು ಮೂರು ಸಾವಿರ ಜನ ಕಾರ್ಮಿಕರ ಸಮಸ್ಯೆ. ಇದರ ಜೊತೆಗೆ ಬಹಳ ಕಷ್ಟಪಟ್ಟುಕೊಂಡು ಈ ಚಲನಚಿತ್ರ ಉದ್ಯಮ ಅದರಲ್ಲಿಯೂ ಕನ್ನಡದಲ್ಲಿ ಚಲನಚಿತ್ರವನ್ನು ತಯಾರು ಮಾಡತಕ್ಕವರು ಇಂತಹ ಉದ್ಯಮ ಬೆಂಗಳೂರು ನಗರದಲ್ಲಿ ಹಾಗೂ ಕರ್ನಾಟಕದಲ್ಲಿ ಆಗಬೇಕು ಎಂದು ಬಹುಶಃ ತಾವು ಸಹ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅಂದರೆ ಮಾನ್ಯ ದೇವರಾಜ್ ಅರಸ್‌ರವರ ಕಾಲದಿಂದ ಸಾಕಷ್ಟು ಪ್ರೋತ್ಸಾಹವನ್ನು ಇದಕ್ಕೆ ಕೊಟ್ಟುಕೊಂಡು ಬಂದಿದ್ದೇವೆ. ಮತ್ತೆ ಪ್ರತಿಯೊಂದು ಸಿನೆಮಾ ಕನ್ನಡದಲ್ಲಿ ಕರ್ನಾಟಕದೊಳಗಡೆ ಮಾಡಿದಂತಹ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳ ಹಣವನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟುಕೊಂಡು ಬಂದಿದ್ದೇವೆ. ಅದರ ಜೊತೆಗೆ ತೆರಿಗೆ ಮೇಲೆ ಶೇಕಡಾ 50ರಷ್ಟು ವಿನಾಯಿತಿಯನ್ನು ಕೂಡ ಕೊಡತಕ್ಕ ಕೆಲಸ ಮಾಡಿಕೊಂಡು ಬಂದಿದ್ದೇವೆ. ಇದರಲ್ಲಿ ಕೆಲವು ಜನ ಹೊಸದಾಗಿ ಚಲನಚಿತ್ರ ಮಾಡತಕ್ಕ ಪ್ರೊಡ್ಯೂಸರ್ಸ್ ಇದ್ದಾರೆ, ಅವರಿಗೆ ಕಷ್ಟ ಇರಬಹುದು. ಆದರೆ ಕೆಲವು ಪ್ರೊಡ್ಯೂಸರ್ಸ್ ಸಾಕಷ್ಟು ಹಣ ಸಂಪಾದನೆ ಮಾಡಿದ್ದಾರೆ ಎಂದು ನಮ್ಮೆಲ್ಲರಿಗೂ ತಿಳಿದಿರತಕ್ಕ ವಿಚಾರ. ಆದರೆ ಇಲ್ಲಿ ಏನು ಆಗಿದೆ?

ಏನಾದರೂ ಒಂದು ನೆಪ ಕೊಟ್ಟು ಒಂದು ಕಾರಣ ಕೊಟ್ಟು ಈ ಉದ್ಯಮವನ್ನು ಮದ್ರಾಸಿಗೋ ಅಥವಾ ಬಾಂಬೆಗೋ ತೆಗೆದುಕೊಂಡು ಹೋಗತಕ್ಕ ಒಂದು ಪ್ರಯತ್ನ ಕೂಡ ನಡೆದಿದೆ ಎನ್ನತಕ್ಕ ಸೂತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದು ಸರ್ಕಾರದ ಗಮನಕ್ಕೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಿಜ, ಒಂದು ಸಿನೆಮಾ ಈಗ ಮದ್ರಾಸಿನಲ್ಲಿ ಮಾಡಿದಾಗ ಅಥವಾ ಬೊಂಬಾಯಿಯಲ್ಲಿ ಮಾಡಿದಾಗ ಅಲ್ಲಿರತಕ್ಕ ಸ್ಟುಡಿಯೋದಲ್ಲಿ 8 ಫ್ಲೋರ್ 16 ಫ್ಲೋರ್‌ಗಳನ್ನು ಹಾಕಬಹುದು. ಅದರಿಂದ ಕಡಿಮೆ ಬಾಡಿಗೆಗೆ ಪ್ರೊಡ್ಯೂಸರ್ಸ್‌ಗೆ ಸ್ಟುಡಿಯೋ ಫೆಸಿಲಿಟೀಸ್‌ಗಳನ್ನು ಕೊಡಬಹುದು. ಅದನ್ನು ಕರ್ನಾಟಕದಲ್ಲಿ ಮಾಡಲಿಕ್ಕೆ ಸದ್ಯಕ್ಕೆ ಆಗದೇ ಇರಬಹುದು. ಆದರೆ ಈ ರೀತಿಯಾಗಿ ಇದನ್ನು ಮುಂದುವರಿಸಿಕೊಂಡು ಹೋದರೆ ಕರ್ನಾಟಕ ರಾಜ್ಯದಲ್ಲಿ ನಾವು ಸಿನೀಮಾ ಮಾಡವುದು ಬೇಡವೆ ಎಂಬ ಪ್ರಶ್ನೆ ಬರುತ್ತದೆ. ನಾವೇನೋ ಸಿನಿಮಾ ನೋಡಿ ಹೊರಗೆ ಬರುತ್ತೇವೆ. ಆದರೆ ಅಲ್ಲಿರತಕ್ಕಂಥವರ ಶೋಷಣೆ ಯಾವ ರೀತಿಯಲ್ಲಿ ಆಗುತ್ತಿದೆ ಎಂಬುದನ್ನು ಬಹಳಷ್ಟು ಜನರು ತಿಳಿದಿರಲಾರರು. ಅವರಿಗೆ ಆಗುತ್ತಿರುವ ಶೋಷಣೆಗಳನ್ನು ಹೇಳಿದರೆ ಅದನ್ನು ಯಾರು ನಂಬುವುದಿಲ್ಲ ಎಂದು ಕಾಣುತ್ತದೆ. ಅವರು ಅಲ್ಲಿ 16 ಗಂಟೆಗಳ ಕಾಲ ಕೆಲಸ ಮಾಡಬೇಕು. ಅಲ್ಲಿರುವವರೆಲ್ಲರೂ ದಿನಗೂಲಿ ನೌಕರರು. ಅವರೇನೂ ಖಾಯಂ ನೌಕರರಲ್ಲ. ಮಾಲೀಕರಿಗೆ ಮನಸ್ಸಿಗೆ ಬಂದರೆ ಇಟ್ಟುಕೊಳ್ಳಬಹುದು, ಇಲ್ಲವಾದಲ್ಲಿ ತೆಗೆದುಹಾಕಬಹುದು. ಎಷ್ಟು ಸಂಬಳ ಬೇಕಾದರೂ ಮಾಲೀಕರ ಇಚ್ಛೆಯಂತೆ ಕೊಡಬಹುದು. ಅವರು ಕೊಟ್ಟರತಕ್ಕಂಥ ಅಗ್ರಿಮೆಂಟ್‌ನ್ನು ಕೂಡ ಈಗತಾನೇ ನೋಡಿದ್ದೇವೆ. ಬಹಳಷ್ಟು ವಿಚಾರಗಳು, ಅಲ್ಲಿ ಶೋಷಣೆ ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಸುತ್ತೇನೆ. ಅಲ್ಲಿನ ಕಾರ್ಮಿಕರು ಯಾವ ಪರಿಸ್ಥಿತಿಯಲ್ಲಿ ತಮ್ಮ ಬದುಕನ್ನು ನಡೆಸುತ್ತಿದ್ದಾರೆ ಎಂದು ತಿಳಿದರೆ ತುಂಬ ದುಃಖದಾಯಕವಾದ ವಿಚಾರ ಸ್ಪಷ್ಟವಾಗುತ್ತದೆ. ಇವೊತ್ತು ನಿರ್ಮಾಪಕರಿಗೂ ಸಮಸ್ಯೆಗಳು ಇಲ್ಲ ಎಂದು ನಾನು ಹೇಳುವುದಿಲ್ಲ, ಅವರಿಗೂ ಸಾಕಷ್ಟು ತೊಂದರೆಗಳು ಇವೆ. ಸಿನಿಮಾ ಮಂದಿರಗಳ ಮಾಲೀಕರುಗಳು, ನಿರ್ಮಾಪಕರುಗಳ ಸಂಘದವರು ಕೂಡ ತಮ್ಮ ಸಮಸ್ಯೆಗಳ ಬಗ್ಗೆ ಸರಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. ಅವರುಗಳಿಗೆ ಏನೇನು ಸಬ್ಸಿಡಿಯನ್ನು ಇನ್ನೂ ಹೆಚ್ಚಿಗೆ ಕೊಡಬೇಕು ಅದನ್ನು ಕೊಡಿ, ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ನಮ್ಮ ಮುಂದಿರುವುದು ಅಲ್ಲಿರುವ ಸುಮಾರು 3000 ಜನ ಕಾರ್ಮಿಕರ ಪ್ರಶ್ನೆ. ಪ್ರೊಡ್ಯೂಸರ್ಸ್ ಬೇಕಾದರೆ ಮುಂಬೈ, ಮದ್ರಾಸ್‌ಗಳಿಗೆ ಹೋಗಿ ಚಲನಚಿತ್ರ ನಿರ್ಮಾಣವನ್ನು ಮಾಡಬಹುದು. ಆದರೆ ನಮ್ಮಲ್ಲಿಯ ಕಾರ್ಮಿಕರುಗಳು ಎಲ್ಲಿಗೆ ಹೋಗಬೇಕು? ಅವರುಗಳು ಮುಂಬೈ ಮದ್ರಾಸ್‌ಗೆ ಹೋಗಲು ಶಕ್ತರೇ? ಅದು ಸಾಧ್ಯವೇ? ಒಂದು ವೇಳೆ ಹೋದರೂ ಅವರಿಗೆ ಅಲ್ಲಿ ಉದ್ಯೋಗ ಸಿಕ್ಕೀತೆ? ಅಲ್ಲಿಯ ಸ್ಥಳೀಯ ಕಾರ್ಮಿಕರು ಇಲ್ಲವೆ? ಅವರು ಇವರಿಗೆ ಅವಕಾಶವನ್ನು ಕೊಡುತ್ತಾರೆಯೇ? ಈ ಕಾರ್ಮಿಕರಲ್ಲಿ ಎಷ್ಟೋ ಜನರು ಬಹಳ ನಿಪುಣರು ಇದ್ದಾರೆ, ಒಳ್ಳೆಯ ಕೆಲಸ ಮಾಡತಕ್ಕಂಥವರು ಇದ್ದಾರೆ. ತಮ್ಮ ಜೀವದ ಹಂಗನ್ನು ತೊರೆದು ಅವರು ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಅಧ್ಯಕ್ಷರೊಬ್ಬರು ಪ್ರೊಡ್ಯೂಸರ್ಸ್ ಅಸೋಸಿಯೇಶನ್‌ನ ಅಧ್ಯಕ್ಷರಾಗಿದ್ದಾರೆ; ಅವರು ಕೂಡ ನಾಗರಹೊಳೆಯಲ್ಲಿ ಒಂದು ಸಿನಿಮಾವನ್ನು ತೆಗೆದಾಗ ಆನೆಗಳಿಗೆ ಅಪಘಾತವಾಯಿತು ಅರಣ್ಯಕ್ಕೆ ತೊಂದರೆಯಾಯಿತು, ಅನೇಕ ಕಾರ್ಮಿಕರಿಗೂ ತೊಂದರೆಯಾಯಿತು. ಆ ಸಂದರ್ಭದಲ್ಲಿ ಅವರಿಗೆ ಸರಕಾರದವರು ಸಾಕಷ್ಟು ಸಹಾಯವನ್ನು ಮಾಡಿದ್ದಾರೆ. ಆದರೆ ಅದೇ ಒಂದು ಧಾರಾಳತನವನ್ನು ತಮ್ಮ ಕಾರ್ಮಿಕರ ಹಿರಿತು ಈ ಪ್ರೊಡ್ಯೂಸರ್ಸ್ ಏತಕ್ಕೆ ತೋರುವುದಿಲ್ಲ ಎಂದು ಬೇಸರವಾಗುತ್ತದೆ. ಇದರಲ್ಲಿ ರಾಜಕೀಯವನ್ನು ಯಾರೂ ಕೂಡ ಬೆರಸಲಿಕ್ಕೆ ಹೋಗಬಾರದು. ನಾವಾಗಲೀ, ನೀವಾಗಲೀ ಯಾರೂ ಆ ಕೆಲಸವನ್ನು ಮಾಡಬಾರದು. ನಾವು ಹಾಗೆ ಈ ವಿಚಾರದಲ್ಲಿ ರಾಜಕೀಯವನ್ನು ಬೆರಸುವುದಕ್ಕೆ ತಯಾರಾಗಿಲ್ಲ. ಈಗ ವಸ್ತುಸ್ಥಿತಿ ಏನಿದೆ? ಕಾರ್ಮಿಕರ ಬವಣೆಗಳು ಏನಿವೆ ಅವುಗಳನ್ನು ನೋಡಬೇಕು. ಅವರುಗಳು ಹಲವಾರು ದಿನಗಳಿಂದ ಬಹಳ ಕಷ್ಟದಲ್ಲಿದ್ದಾರೆ. ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಅವರಲ್ಲಿ ಚಾಕಚಕ್ಯತೆ ಇದೆ; ಅವರೆಲ್ಲರೂ ಚಾಣಾಕ್ಷರು. ಪರಿಣತರು ಇದ್ದಾರೆ. ಅವರನ್ನು ಕೇಳುವವರಿಲ್ಲವಾಗಿದೆ. ಪ್ರೊಡ್ಯೂಸರ್ಸ್ ಹತ್ತಿರ ಕೆಲವರಲ್ಲಿ ಹಣ ಇರಬಹುದು. ಅವರಿಗೆ ತೊಂದರೆ ಇಲ್ಲ; ಬಾಂಬೆ, ಮದ್ರಾಸ್‌ಗಳಲ್ಲಿ ಹೋಗಿ ಚಿತ್ರ ನಿರ್ಮಾಣ ಮಾಡೋಣ ಎನ್ನುವವರಿದ್ದಾರೆ. ಏಕೆಂದರೆ ಅಲ್ಲಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಅನುಕೂಲಗಳು ಇರಬಹುದು. ಇಂಥ ನೆಪಗಳನ್ನು ಏನಾದರೂ ಮಾಡಿ ಒಡ್ಡಿ, ಸರಕಾರದ ಸಬ್ಸಿಡಿ ಹಣವನ್ನು ಪಡೆದುಕೊಂಡು, ಬೇರೆ ಕಡೆಗಳಲ್ಲಿ ಹೋಗಿ ಸಿನಿಮಾ ಮಾಡತಕ್ಕಂಥ ಕೆಲಸ ಅವರಿಂದ ನಡೆದಿದೆ. ಆದ್ದರಿಂದ

ಮಾನ್ಯ ಮಂತ್ರಿಯವರು ಈ ಸಮಸ್ಯೆಯನ್ನು ಎರಡು ದಿವಸಗಳಲ್ಲಿ ಬಗೆಹರಿಸುತ್ತೇನೆಂದು ಏನು ಹೇಳಿದ್ದಾರೆ, ಆ ದಿಸೆಯಲ್ಲಿ ನಿಮಗೆ ಯಶಸ್ಸು ಸಿಗಲಿ. ಒಂದು ವೇಳೆ ತಮ್ಮ ಕೈಯಲ್ಲಿ ಸಾಧ್ಯವಾಗದೇ ಹೋದರೆ, ಮಾನ್ಯ ಮುಖ್ಯಮಂತ್ರಿಯವರ ಸಹಾಯವನ್ನು ಪಡೆದು ಅದನ್ನು ಬಗೆಹರಿಸಿ ಮುಖ್ಯ ಮಂತ್ರಿಯವರಿಗೆ ಈ ರಂಗದಲ್ಲಿನ ಎಲ್ಲರ ಪರಿಚಯವೂ ಇದೆ. ಅಲ್ಲಿ ಸಂಬಂಧಪಟ್ಟವರೆಲ್ಲರನ್ನೂ ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅವರಿಗೆ ಆ ರಂಗದಲ್ಲಿನ ಸಮಸ್ಯೆಗಳು ಕೂಡ ಅರಿವಾಗಿರಬಹುದು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ನಂತರ ಅವರು ಏಕೆ ಇದಕ್ಕೆ ಸಾಫ್ಟ್ ಕಾರ್ನರ್ ತೋರಿಸುತ್ತಾ ಇದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಸಿನಿಮಾ ರಂಗದಲ್ಲಿ ಕಾರ್ಮಿಕರ ಶೋಷಣೆ ಏನು ಆಗುತ್ತಿದೆ ಅದನ್ನು ತಿಳಿದೂ ಇವರು ಸುಮ್ಮನೆ ಕುಳಿತಿದ್ದಾರಲ್ಲ? ಎಂದು ಬೇಸರವಾಗುತ್ತದೆ. ಇಂಥ ಗಂಭೀರ ಸಮಸ್ಯೆಗಳನ್ನು ಕೇವಲ ಸಭೆ ಮಾಡಿ ಅಲ್ಲಿಗೆ ಬಿಟ್ಟರೆ ಮುಗಿಯುವುದಿಲ್ಲ. ಇದನ್ನು ತೀರ ಗಂಭೀರವಾಗಿ ಪರಿಗಣಿಸಿ 4–5 ದಿನಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

† ಶ್ರೀ ಶಿವಾನಂದ ಎಚ್. ಕೌಜಲಗಿ :– ಮಾನ್ಯ ಅಧ್ಯಕ್ಷರೇ, ಈ ಕಾರ್ಮಿಕ ವರ್ಗದವರು ಲೇಬರ್ ಆಕ್ಟ್‌ನಲ್ಲಿ ಬರುತ್ತಾ ಇದ್ದಾರೋ ಹೇಗೆ? ಒಂದು ವೇಳೆ ಬಾರದಿದ್ದಲ್ಲಿ ಇವರನ್ನು ಲೇಬರ್ ಆ್ಯಕ್ಟ್ ಪ್ರಕಾರ ಸೇರಿಸುವುದಕ್ಕೆ ಏನು ಮಾಡುತ್ತೀರಿ? ಎರಡನೆಯದಾಗಿ ಇವೊತ್ತಿನ ದಿವಸ ಸಬ್ಸಿಡಿಯನ್ನು ಕೊಡುತ್ತಾ ಇದ್ದೀರಿ. ಆ ಕಾರಣಕ್ಕಾಗಿ ನಿರ್ಮಾಪಕರು ಒಂದು ರೀತಿಯಲ್ಲಿ ನಿಮ್ಮ ಹಂತದಲ್ಲಿ ಬರುತ್ತಾರೆ; ಹೀಗಿರುವಾಗ ಅವರನ್ನು ಹೆದರಿಸಿ ಒಂದು ರಾಜಿ ತೀರ್ಮಾನವನ್ನು ಮಾಡಿಸಿ, ಈ ಅನ್ಯಾಯಕ್ಕೆ ಒಳಗಾದ ಕಾರ್ಮಿಕರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಕಾರ್ಮಿಕರಿಂದ ಬಹಳ ದಿನಗಳಿಂದ ನಡೆದಿರುವ ಮುಷ್ಕರವನ್ನು ಎರಡು ದಿನಗಳಲ್ಲಿ ಬಗೆಹರಿಸುವುದಾಗಿ ಸಚಿವರು ಹೇಳಿದ್ದಾರೆ; ಒಳ್ಳೆಯದು ಅದಕ್ಕಾಗಿ ಅವರಿಗೆ ಅಭಿನಂದನೆಗಳು. ಕರ್ನಾಟಕದಲ್ಲಿ ಕನ್ನಡ ಚಲನ ಚಿತ್ರರಂಗ ಬೇರೂರುವುದಕ್ಕೆ ಅನೇಕ ಬೆಂಬಲಗಳು ಸಹಕಾರಗಳನ್ನು ಹಿಂದಿನಿಲ್ಲ ಸರ್ಕಾರಗಳಿಗೂ ಕೊಟ್ಟಿವೆ. 60ನೇ ಇಸವಿಯಲ್ಲಿ ಒಂದು ಕನ್ನಡ ಚಿತ್ರ ತೆಗೆಯಬೇಕೆಂದರೆ ಒಂದೂವರೆ ಲಕ್ಷ ಎಂದರೆ ಆಕಾಶಕ್ಕೆ ಹೋಗುವ ಪರಿಸ್ಥಿತಿ ಇತ್ತು; ಇಂದು ಚಿತ್ರವೊಂದಕ್ಕೆ ಒಂದು, ಒಂದೂವರೆ ಕೋಟಿ ಖರ್ಚುಮಾಡಿ ಸಿನಿಮಾಸ್ಕೋಪ್ ಮಾದರಿ ಚಿತ್ರ ತೆಗೆಯುವ ಮಟ್ಟಕ್ಕೆ ಚಿತ್ರರಂಗ ಬೆಳೆದಿದೆ. ಇವತ್ತು ಏನಾಗಿದೆ ಅರಿದರೆ ಮಾಲೀಕರು, ವಿತರಕರು ಮತ್ತು ನಿರ್ಮಾಪಕರು ಈ ಮೂರು ಜನ ಒಂದು ಗೂಡಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿಯಲ್ಲಿ ಈ ಮೂರು ಜನರದ್ದೇ ಮೇಲುಗೈ ಆಗಿದೆ. ಅದರಲ್ಲಿ ಕಾರ್ಮಿಕರ ಪ್ರತಿನಿಧಿ ಯಾರೂ ಇಲ್ಲ. ಅವರು ಕಾರ್ಮಿಕರನ್ನು ಶೋಷಣೆಗೆ ಒಳಪಡಿಸಿದ್ದಾರೆ. ಕರ್ನಾಟಕದಲ್ಲಿ ಕಂಠೀರವ, ಅಭಿಮಾನ, ಪ್ರೀಮಿಯರ್ ಎಂದು ಮೂರು ಸ್ಟುಡಿಯೋಗಳಿವೆ ಇವುಗಳಲ್ಲಿ ಉತ್ತಮ ಚಿತ್ರ ತೆಗೆಯುವ ಎಲ್ಲ ಸವಲತ್ತುಗಳಿವೆ. ಆದರೆ ನಮ್ಮ ನಿರ್ಮಾಪಕರಿಗೆ ಸರ್ಕಾರದಿಂದ ಹಣ ಬೇಕು, ಸವಲತ್ತು ಬೇಕು ಮತ್ತೆ ಎಲ್ಲ ರೀತಿಯ ಸಹಕಾರ ಸಹಾಯ ಬೇಕು; ಆದರೆ ಚಿತ್ರ ಮಾತ್ರ ಕರ್ನಾಟಕದಲ್ಲಿ ತೆಗೆಯಬಾರದೆಂಬ ನೀತಿ ಇವರದು. ಮಾತೆತ್ತಿದರೆ ತಮಿಳುನಾಡಿಗೆ ಹೋಗಬೇಕೆಂಬುದು ಅವರ ವಾದ. ಆದ್ದರಿಂದ ಸರ್ಕಾರ ಅವರ ಮೇಲೆ ಅನೇಕ ಲಗಾಮು ಹಾಕಬೇಕು ತಮಿಳುನಾಡಿನಲ್ಲಿ ತೆಗೆಯುವ ಚಿತ್ರಗಳಿಗೆ ಒಂದು ನಯಾಪೈಸೆ ಮನರಂಜನಾ ತೆರಿಗೆ ಕೊಡುವುದಿಲ್ಲವೆಂದು ಕಡ್ಡಾಯ ಮಾಡಿದರೆ, ಇಲ್ಲೇ ಅವರು ಉಳಿಯುತ್ತಾರೆ. ಇವತ್ತು ಕಾರ್ಮಿಕರು ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಕಾರ್ಖಾನೆ ಕಾರ್ಮಿಕರಂತೆ ಇವರೂ ದಿನಕ್ಕೆ 8 ಗಂಟೆಯಿಂದ 16 ಗಂಟೆ ದುಡಿಮೆ ಮಾಡುತ್ತಾರೆ. ಇದನ್ನು ತಪ್ಪಿಸಲು ಸರ್ಕಾರ ಯಾರ ಮುಲಾಜಿಗೂ ಬೀಳದೆ ಒಂದು ಪರಿಣಾಮಕಾರಿ ಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮ ಚಲನ ಚಿತ್ರ ಥಿಯೇಟರುಗಳನ್ನೆಲ್ಲ ರಾಷ್ಟ್ರೀಕರಣ ಮಾಡಬೇಕೆಂದು ಅನೇಕಸಲ ನಾನು ಹೇಳಿದ್ದೇನೆ. ಅವೆಲ್ಲ ಕೆಲವರ ಗುತ್ತಿಗೆದಾರರ ಕೈಯಲ್ಲಿ ಸಿಕ್ಕಿಹಾಕಿಕೊಂಡಿವೆ. ನಿರ್ಮಾಪಕರಲ್ಲೂ ನೂರಕ್ಕೆ 10 ಭಾಗ ತೊಂದರೆ ಅನುಭವಿಸುತ್ತಿರಬಹುದು; ಆದರೆ 90 ಭಾಗ ಕನ್ನಡ ಚಿತ್ರರಂಗದಿಂದ ಕೋಟ್ಯಾಂತರ ಹಣವನ್ನು ದುಡಿದಿದ್ದಾರೆ; ಆದ್ದರಿಂದ ದಯವಿಟ್ಟು ಯಾವುದೇ ಒತ್ತಾಯಕ್ಕೂ

ಮಣೆಯದೆ ಈ ಕಾರ್ಯಕರ್ತರ ಪರವಾಗಿ ನಿಂತು ಈ ಪ್ರಶ್ನೆ ಬಗೆಹರಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು) : ಅಧ್ಯಕ್ಷರೇ, ಈಗಾಗಲೇ ವಿರೋಧಪಕ್ಷದ ನಾಯಕರಾದಂಥ ಚಂದ್ರೇಗೌಡರು ಸಿಂಧ್ಯಾರವರು ಕೌಜಲಗಿಯವರು ವಾಟಾಳ್ ನಾಗರಾಜ್‌ರವರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಮುಖ್ಯವಾಗಿ ಹೇಳುತ್ತೇನೆ, ಯಾವುದೇ ಕಾರ್ಮಿಕರಿರಲಿ, ಅವರು ಸರ್ಕಾರದ ರಕ್ಷಣೆಗೆ ಒಳಗಾಗಿದ್ದಾರೆ ಎಂದು ಸ್ಪಷ್ಟ ಪಡಿಸುತ್ತೇನೆ. ಇಂದು ಪ್ರೊಡ್ಯೂಸರ್ಸ್ ಶ್ರೀಮಂತರು ಅಥವಾ ನೇರವಾಗಿ ರಾಜಕಾರಣಿಗಳ ಸಂಬಂಧಿಕರೇ ಆಗಿರಬಹುದು; ಆದರೆ ನಾವು ಕಾಯಿದೆಯನ್ನು ಬದಲಾಯಿಸುವುದಕ್ಕಾಗುವುದಿಲ್ಲ ಈ ಒಂದು ನಿಟ್ಟಿನಲ್ಲಿ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲನೆ ಮಾಡುತ್ತೇವೆ. ಅಲ್ಲದೆ ನಮ್ಮ ಕೌಜಲಗಿಯವರು ಒಂದು ಮಾತು ಕೇಳಿದರು; ಈಗಾಗಲೇ ಈ ಸಿನಿಮಾ ಕಾರ್ಮಿಕರು ಲೇಬರ್ ಆಫೀಸಿನೊಳಗೆ ಬರುವರೇ ಎಂದು. ಸಿನಿಮಾ ವರ್ಕರ್ಸ್ ಕೂಡ ಈ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಕೆಳಗಡೆ ಬರುತ್ತಾರೆ. ಈಗ ಅವರಿಗೆ ಆಗುತ್ತಿರುವ ಶೋಷಣೆಯಾಗಲೀ, ಅವರಿಗೆ ಕೊಡತಕ್ಕ ಸೌಲಭ್ಯವಾಗಲೀ, ನೇರವಾಗಿ ಏನಾದರು-ಕೆಚ್ಚು ಕೆಡಿಮೆ ಆದಾಗ ಅವರು ನಮಗೆ ಸಂಬಂಧಪಡುತ್ತಾರೆಂದು ತಮಗೆ ತಿಳಿಸುತ್ತಿದ್ದೇನೆ. ಅದು ಅಲ್ಲದೆ ನಮ್ಮ ಸಿಂಧ್ಯರವರು ಈಗಾಗಲೇ ಕರಾರು ಒಪ್ಪಂದ ಆಗಿ ಬಿಟ್ಟಿತ್ತು ಎನ್ನತಕ್ಕ ಮಾತನ್ನು ಹೇಳಿದರು. ಆದರೆ ಕರಾರು ಒಪ್ಪಂದ ಆಗಿಲ್ಲ; ನಮ್ಮ ಲೇಬರ್ ಕಮಿಷನರ್‌ರವರ ಮುಂದೆ ಡಿಸ್‌ಕಷನ್ ಏನಾಯಿತು, ಅಂದರೆ ಯಾವ ಒಂದು ಸಲಹೆಗಳನ್ನು ಅಲ್ಲಿ ಸೂಚಿಸಲಾಗಿತ್ತೋ ಅದರ ಬಗ್ಗೆ ಮಾತ್ರ ನಾವು ಸ್ಪಷ್ಟಪಡಿಸಿದ್ದೇವೆ. ಒಪ್ಪಂದ ಇನ್ನೂ ಆಗಿಲ್ಲ, ಆ ಒಪ್ಪಂದ ಸದ್ಯದಲ್ಲಿಯೇ ಆಗಬಹುದು ಎನ್ನುವಂತಹ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. Joint Committee on South Indian Films ಎಂದು ಯಾವರೀತಿಯಾಗಿ ನಮ್ಮ Industrial disputes Act 12(3) ಪ್ರಕಾರ ಯಾವ ರೀತಿ Memorandum of agreement ಅಪ್ಲೈ ಮಾಡಿಕೊಂಡಿದ್ದಾರೇ; ಈ ರೀತಿಯಾಗಿ ನಮ್ಮ ಕರ್ನಾಟಕದಲ್ಲಿಯೂ ಕೂಡ ನಾವು ತರುವಂತಹ ಪ್ರಯತ್ನವನ್ನು ಮಾಡುತ್ತೇವೆ. ಇದರ ಹಿನ್ನೆಲೆಯಲ್ಲಿ ಯಾವ ರಾಜಕೀಯವಾಗಲಿ ಇಲ್ಲ, ನಮ್ಮ ಮುಖ್ಯ ಮಂತ್ರಿಗಳ ಬಗ್ಗೆ ತಾವು ಸೂಚನೆ ಕೊಟ್ಟಿದ್ದೀರಿ, ಅವರು ಕೂಡ ಸಾಕಷ್ಟು ಪ್ರೊಡ್ಯೂಸರ್ಸ್ ಜೊತೆಯಲ್ಲಿ ಸಂಬಂಧ ಇದ್ದವರಾಗಿದ್ದಾರೆಂದು ಹೇಳಿದ್ದೀರಿ. ಆದರೆ ಅವರ ನಿಲುವು ನಮ್ಮ ಸರ್ಕಾರದ ನಿಲವು ಸ್ಪಷ್ಟವಾದ ನಿಲುವಾಗಿದೆ. ಕಾಯಿದೆ ಕಾನೂನುಗಳಿಗೆ ಅಂಟಿಕೊಂಡು ಈ ಒಂದು ಸಮಸ್ಯೆಯನ್ನು ಲೇಬರ್ ಗ್ರಿವೆನ್ಸಸ್ ಅಂತ ಏನು ಇದ್ದಾವೆ; ಇದನ್ನು ಸಂಪೂರ್ಣವಾಗಿ ಬಗೆಹರಿಸಲಿಕ್ಕೆ ಯಾವ ಪಕ್ಷಕ್ಕೂ ಅಂಟಿಕೊಳ್ಳಲಾರದೆ ಈ ಒಂದು ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮವು ಸೂಕ್ತವಾಗಿ ಕಾರ್ಯಾಚರಣೆ ನಡೆಸದಿರುವ ಬಗ್ಗೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ನಿಗಮವು ಸೂಕ್ತವಾಗಿ ಕಾರ್ಯಾಚರಣೆ ನಡೆಸದಿರುವ ಬಗ್ಗೆ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಕಾನೂನು ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ದಿನಾಂಕ 1–9–1987ರಿಂದ ಕಂಪನಿ ಕಾಯ್ದೆ ಅನ್ವಯ ನೋಂದಣಿಯಾಗಿದ್ದು ದಿನಾಂಕ 1–6–1988 ರಿಂದ ಕಛೇರಿಯನ್ನು ಪ್ರಾರಂಭ ಮಾಡಲಾಗಿದೆ. ಪ್ರಾರಂಭದಲ್ಲಿ ನಿಗಮಕ್ಕೆ ಆರ್ಥಿಕ ಮುಗ್ಗಟ್ಟು ಇದ್ದು ಹಾಗೂ ಈ ನಿಗಮವನ್ನು ಮುಂದುವರೆಸುವ ಅವಶ್ಯಕತೆ ಹಾಗೂ ಇತರೆ ನಿಗಮದೊಂದಿಗೆ ವಿಲೀನಗೊಳಿಸುವ ವಿಚಾರದಲ್ಲಿ ಸಮಿತಿ ರಚಿಸಲಾಗಿದ್ದು, ಪ್ರಾರಂಭದಲ್ಲಿ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಲಿಲ್ಲ. 1989–90ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು 19.00 ಲಕ್ಷ ರೂಪಾಯಿ ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ 20.00 ಲಕ್ಷ ಶೇರು ಬಂಡವಾಳ ಒದಗಿಸಿದೆ. ನಿಗಮವು